ಮಂತ್ರಿಮಂಡಲದವರಿಂದ ಖರ್ಚಾದ ವೆಚ್ಚ.

೬೪ ಶ್ರೀ ಕೆ. ಹೆಚ್. ಪಾಟೀಲ್(ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ೧-೪-೮೪ ರಿಂದ ೩೧-೧೨-೮೫ರವರೆಗೆ ರಾಜ್ಯದ ಮಂತ್ರಿ ಮಂಡಲದಲ್ಲಿ ಮಂತ್ರಿಗಳು ಮಾಡಿರುವ ಈ ಕೆಳಗಿನ ಬಾಬ್ತುಗಳ ಖರ್ಚು ಎಷ್ಟು ?

ಸಂಬಳ, ತುಟ್ಟಿಭತ್ಯ, ಪ್ರವಾಸ ಭತ್ಯ, ದವಾಖಾನೆಯ ಖರ್ಚು, ದೂರವಾಣಿ, ಮನೆ ನವೀಕರಣಕ್ಕಾಗಿ ಹಾಗೂ ಅವರ ಸಿಬ್ಬಂದಿ ವರ್ಗಕ್ಕಾದ ವೆಚ್ಚವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯಮಂತ್ರಿಗಳು).—

ಸಂಬಳ	ರೂ. ೬,೨೩,೧೬೦-೧೦
ದಿನಭತ್ಯ	
ಪ್ರವಾಸ ಭತ್ಯ	೧೫ ೩೭,೩೨೫-೯೫
ತುಟ್ಟಿ ಭತ್ಯ	ಇಲ್ಲ
ದವಾಖಾನೆ ಖರ್ಚು	೪೯೯-೯೦
ದೂರವಾಣಿ ಖರ್ಚು	೧೭,೫೬,೪೬೦-೦೦
ಮನೆ ನವೀಕರಣದ	
ಖರ್ಚು	೫,೧೬,೬೯೬-೦೦
ಸಿಬ್ಬಂದಿ ವೆಚ್ಚ	೫೬,೧೩,೯೧೪-೭೫

ಶ್ರೀ ಕೆ. ಎಚ್. ಪಾಟೀಲ್.—ಪ್ರತಿತಿಂಗಳು ಯಾವ ಯಾವ ಮಂತ್ರಿಗಳಿಗೆ ಪ್ರವಾಸ ಭತ್ಯ ಕ್ಕೋಸ್ಕರ ಎಷ್ಟೆಷ್ಟು ಖರ್ಚಾಗಿದೆ ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಒಂದು ದೊಡ್ಡ ಪಟ್ಟಿಯೇ ಇರುತ್ತದೆ. ಅಷ್ಟನ್ನು ಓದಿ ಹೇಳುವುದಕ್ಕೆ ಸಮಯ ಬೇಕಾಗುತ್ತದೆ.

ಅಧ್ಯಕ್ಷರು.—ಅದನ್ನು ಬೇಕಾದರೆ ಅವರಿಗೆ ಕಳುಹಿಸಿಕೊಡಿ.

ಶ್ರೀ ಕೆ. ಎಚ್. ಪಾಟೀಲ್.—ನಾನು ಕೇಳಿದ ಉದ್ದೇಶವೇನೆಂದರೆ ಈ ವಿಚಾರ ಸಭೆಯಲ್ಲಿ ಎಲ್ಲರಿಗೂ ಗೊತ್ತಾಗಲಿ ಎಂದು.

ಸಚಿವರುಗಳು	ಸಂಬಳ	ಪ್ರವಾಸಭತ್ಯ	ದುರಸ್ತಿವಾಣಿ ಮನೆ — ಆಫೀಸ್		ಮನೆನವೀಕರಣ	ದವಾಖಾನೆ	ಸಿಬ್ಬಂದಿ ವೆಚ್ಚ
	ರೂ.	ರೂ.	ರೂ.	ರೂ.	ರೂ.	ರೂ.	ರೂ.
ಮುಖ್ಯಮಂತ್ರಿಗಳದ್ದು	೧೫,೭೫೦	೭೦,೧೭೦	೪೨,೬೬೭	— ೫೫,೭೯೫	ಇಲ್ಲ	ಇಲ್ಲ	೮,೪೯,೦೦೦
ಶ್ರೀ ಬಿ. ರಾಚಯ್ಯ	೨೪,೩೦೦	೩೮,೨೨೭	೧೨,೭೧೩	— ೨೪,೭೩೩	೨೮,೦೦೦	ಇಲ್ಲ	೧,೦೨,೦೦೦
ಶ್ರೀ ಅಬ್ದುಲ್ ನಜೀರ್ ಸಾಬ್	೨೪,೩೦೦	೯೦,೭೩೭	೪೧,೯೬೯	— ೫೬,೦೮೮	೧೦,೦೩೦	ಇಲ್ಲ	೧,೪೭,೫೫೫
ಶ್ರೀ ಎಸ್. ಆರ್. ಬೊಮ್ಮಾಯಿ	೨೪,೩೦೦	೫೪,೭೦೮	೫೨,೫೩೯	— ೭೧,೨೨೮	೨೧,೪೫೪	ಇಲ್ಲ	೯೨,೧೫೦
ಶ್ರೀ ಎಚ್. ಡಿ. ದೇವೇಗೌಡ	೨೪,೩೦೦	೭೪,೪೧೬	೬೨,೦೪೧	— ೧೯,೯೪೪	—	—	೯೪,೫೦೧
ಶ್ರೀ ಜೆ. ಎಚ್. ಪಟೇಲ್	೨೨,೧೫೧	೩೪,೦೬೭	೫೫,೪೮೭	— ೨೨,೭೮೦	೩,೦೭೬	—	೧,೫೬,೪೪೭
ಶ್ರೀ ವಿ. ಎಲ್. ಪಾಟೀಲ್	೧೫,೭೫೦	೪೯,೬೧೧	೫೦,೧೧೮	—೧,೦೫,೫೬೭	೩೨.೫೯೦	ಇಲ್ಲ	೮೭,೭೩೨
ಶ್ರೀ ಎ. ಲಕ್ಷ್ಮೀಸಾಗರ್	೧೫,೭೫೦	೨೭,೬೦೬	ಇಲ್ಲ	— ೧೧,೧೫೨	ಇಲ್ಲ	ಇಲ್ಲ	೭೪,೨೧೧
ಶ್ರೀ ಆರ್. ಎಲ್. ಜಾಲಪ್ಪ	೧೫,೭೫೦	೪೧,೮೧೩	೬,೮೭೩	— ೧೬,೩೧೪	೧೬;೦೧೪	ಇಲ್ಲ	೪೮,೪೫೬
ಶ್ರೀ ಡಿ. ಮಂಜುನಾಥ್	೨೪,೩೨೦	೪೭,೪೭೪	೩,೫೯೩	— ೮,೨೩೫	—	—	೧,೧೪,೦೮೫
ಡಾ ಎಚ್. ಎಲ್. ತಿಮ್ಮೇಗೌಡ	೨೪,೩೦೦	೬೯,೪೧೫	೧೧,೨೧೯	— ೨೯,೮೦೪	—	—	೯೪,೬೮೭
ಶ್ರೀ ಜೆ. ಎಸ್ ದೇಶಮುಖ್	೨೨,೧೫೧	೩೬,೪೯೯	೧೨,೪೧೨	— ೧೪,೧೪೯	ಇಲ್ಲ	೧೫೩	೯೯,೮೩೭
ಶ್ರೀ ಬಿ. ಬಸವಣ್ಣಪ್ಪ	೧೫,೭೫೦	೨೯,೨೦೮	೨೩,೬೦೩	— ೩೨,೦೦೭	ಇಲ್ಲ	ಇಲ್ಲ	೯೩,೬೩೪
ಶ್ರೀ ಎಂ. ರಘುಪತಿ	೨೪,೩೦೦	೪೩,೯೪೧	೬೬,೪೪೧	— ೩೮.೮೭೭	೫೬,೬೯೦	ಇಲ್ಲ	೧,೧೧,೬೬೩
ಶ್ರೀ ಸಿ. ಬೈರೇಗೌಡ	೧೫,೭೫೦	೬೭,೩೩೭	೧೧,೮೯೯	— ೧೦,೨೩೦	೪೦,೦೦೦	ಇಲ್ಲ	೭೩,೮೦೦
ಶ್ರೀ ಬಿ. ಎ. ಜೀ ವಿಜಯ	೨೨,೦೫೦	೩೮,೫೮೯	೨೫,೪೭೮	— ೩೦,೨೪೬	೧೬,೬೬೭	ಇಲ್ಲ	೧,೧೫,೫೨೦
(ಅರಣ್ಯ ಸಚಿವರು).— ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ಸಚಿವರು).—	೧೩,೫೦೦	೫೦,೯೪೦	ಇಲ್ಲ	೩೪,೦೪೯	೨೧.೬೪೧	೪೨,೬೯೨	೧೩೦೯೩೨
ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—	೨೨,೦೫೦	೫೨,೬೦೪	ಇಲ್ಲ	೩೯,೧೮೧	೪೫.೦೯೫	೩೯,೭೫೦	೭೮೬೭೮
ಶ್ರೀ ಜೀವರಾಜ್ ಆಳ್ವ (ವಾರ್ತಾ ಸಚಿವರು)	೨೨,೦೫೦	೨೮,೭೫೯	ಇಲ್ಲ	೨೪,೪೯೫	೮,೪೪೬	೧೫,೫೮೬	೧೧೧೯೩೬

ಶ್ರೀ ರಮೇಶ್ ಜಿಗಜಿಣಗಿ (ಅಬಕಾರಿ ಮಂತ್ರಿಗಳು).—	೨೦,೨೨೭	೭೦,೧೭೦	ಇಲ್ಲ	೪೧,೭೨೭	೫೬,೯೪೯	೨,೩೫೯	೫೭,೪೯೩
ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು).—	೨೨,೮೫೦	೬೦,೦೦೫	ಇಲ್ಲ	೩೪,೯೭೭	೫೫,೯೯೦	ಇಲ್ಲ	೭೧,೦೯೯
ಶ್ರೀ ಎಸ್. ಸಿದ್ದರಾಮಯ್ಯ (ಪ್ರವಾಸೋದ್ಯಮ ಸಚಿವರು)	೨೨,೦೫೦	೬೦,೬೦೭	೩೪೬	೨೯,೫೯೬	೪೨,೬೯೯	೯,೯೦೯	೧,೦೦೦
ಶ್ರೀ ಜಿ. ಪಿ. ಇನಾಂದಾರ್ (ಅರಣ್ಯ ರಾಜ್ಯ ಸಚಿವರು).—	೪೫,೮೦೫	.....					

ಶ್ರೀಕೆ. ಹೆಚ್. ಪಾಟೀಲ್.—ಒಬ್ಬೊಬ್ಬ ಮಂತ್ರಿಗಳಿಗೂ ಸಂಬಂಳ ಬೇರೆಇದೆಯೇ ? ಏತಕ್ಕೆಂದರೆ ಇದರಲ್ಲಿ ಬಹಳ ವ್ಯತ್ಯಾಸವಿದೆ. ತಾವು ಕೊಟ್ಟಿಂತಹ ಸ್ಟೇಟ್‌ಮೆಂಟ್ ಸರಿಯೋ, ಇಲ್ಲವೋ ಗೊತ್ತಿಲ್ಲ

ಶ್ರೀ ರಾಮಕೃಷ್ಣ ಹೆಗಡೆ.—ಬಹುಶಃ ಅವರ ಸಂಬಳದ ಸ್ಕೇಲ್ ಎಂದರೆ ೧,೭೫೦ ರೂಪಾಯಿ ಗಳು. ಕನ್‌ವೇಯಾನ್ಸ್ ೯೫೦ ರೂಪಾಯಿಗಳು. ಒಟ್ಟು ೨,೭೦೦ ರೂಪಾಯಿಗಳು. ಇದು ೯ ತಿಂಗಳಿಗೆ ೨೪,೩೦೦ ರೂಪಾಯಿಗಳಾಗಬೇಕಾಗಿತ್ತು. ಬಹುಶಃ ೨ ತಿಂಗಳ ಸಂಬಳವನ್ನು ಕೆಲವರು ಡ್ರಾ ಮಾಡಿಲ್ಲ.

ಅಧ್ಯಕ್ಷರು.— ಈ ಪ್ರಶ್ನೆ ಸಂಖ್ಯೆ (೨೯೭ (೭೮೮) ಇದನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಜಿ. ಎಂ. ಕಾನಡೆ,— ಅಧ್ಯಕ್ಷರೆ, ನಾನು ಯಾವಾಗ ಕೊಟ್ಟರೂ ಇದೇ ರೀತಿ ಮಾಡುತ್ತಾರೆ. ಇಲ್ಲಿ ಇಬ್ಬರು ಮಂತ್ರಿಗಳಿದ್ದಾರೆ. ನನ್ನ ಪ್ರಶ್ನೆಗೆ ಯಾವಾಗ ಉತ್ತರ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು.

ಶ್ರೀ ವಿ.ಎಲ್. ಪಾಟೀಲ್.— ಮುಂದಿನ ವಾರ ತರಿಸಿಕೊಡುತ್ತೇನೆ.

ದಿನಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ವಿಶೇಷ ಘಟಕ ಯೋಜನೆ

೭೫೨ ಶ್ರೀ ಬಿ. ಎಂ. ತಿಪ್ಪೇಸ್ವಾಮಿ (ಭರಮಸಾಗರ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವಿರಾ ?

ಅ) ೧೯೮೪-೮೫ ಮತ್ತು ೧೯೮೫-೮೬ರ ಅವಧಿಯಲ್ಲಿ ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿಗೆ ಮಂಜೂರಾದ ಮೊತ್ತವೆಷ್ಟು ?

ಆ) ಈ ಅವಧಿಯಲ್ಲಿ ಖರ್ಚು ಮಾಡಿದ ಹಣವೆಷ್ಟು ? ಹಾಗೂ ಪ್ರತಿ ಹಂತಗಳಲ್ಲಿಯೂ ಪಾಕಿ ಕೊಂಡ ಗುರಿಯನ್ನು ಸಾಧಿಸಲಾಗಿದೆಯೇ ?

ಇ) ಮಂಜೂರಾದ ಹಣದಲ್ಲಿ ಖರ್ಚಾಗದೆ ಉಳಿದಿರುವ ಮೊತ್ತವೆಷ್ಟು ? ಹಾಗೂ ಇದಕ್ಕೆ ಹೊಣೆಗಾರರು ಯಾರು ಮತ್ತು ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಯವರು) .—

(ಅ) ಮತ್ತು (ಆ)

೧೯೮೪-೮೫ ಮತ್ತು ೧೯೮೫-೮೬ನೇ ಸಾಲುಗಳಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನರ ಉಪ ಯೋಜನೆಯಲ್ಲಿ ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ನಿಗದಿ ಪಡಿಸಿದ ಹಣ ಹಾಗೂ ಉಪಯೋಗಿಸಿದ ಹಣ ಕೆಳಕಂಡಂತಿದೆ.

ವಿಶೇಷ ಘಟಕ ಯೋಜನೆ (ಪರಿಶಿಷ್ಟ ಜಾತಿಯವರಿಗಾಗಿ)

(ರೂ. ಲಕ್ಷಗಳಲ್ಲಿ)

ವರ್ಷ	ನಿಗದಿಪಡಿಸಿದ ಹಣ	ಉಪಯೋಗಿಸಿದ ಹಣ
೧೯೮೪-೮೫	೭,೮೨೦.೩೫	೭,೦೨೧.೩೫
೧೯೮೫-೮೬	೭,೬೨೨.೦೮	೧,೬೭೦.೧೪

(ಸೆಪ್ಟೆಂಬರ್ ಅಂತ್ಯದವರೆಗೆ)